**ಎಸ್.ಸಿ. ನಂ. 22/2021**

**ದೋ.ಸಾ. : 18 ಪ್ರಾ.ಸಾ. : 11**

ಸಾಕ್ಷಿಯ ಹೆಸರು : ಕಲಿಮುದ್ದಿನ್ ಅಬ್ದುಲ್ ರೆಹಮಾನ ಶೇಖ

**ದಿನಾಂಕಃ 22-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ-**

6. ಆರೋಪಿಯ ಮನೆಯ ಬಳಿ ಹಾಗೂ ಮೃತ ಅಬುತಾಲೀಬ್ ಮನೆಯ ಬಳಿ ರಸ್ತೆ ಕಾಮಗಾರಿ ನಡೆಯುತ್ತಿದ್ದವು ಎಂದರೆ ಸಾಕ್ಷಿ, ಅಬುತಾಲೀಬ್ ರವರ ಮನೆಯು ಆರೋಪಿಯ ಮನೆಯಿಂದ ಸ್ವಲ್ಪ ದೂರದಲ್ಲಿದ್ದು, ಆರೋಪಿಯ ಮನೆಯ ಬಳಿ ಮಾತ್ರ ರಸ್ತೆ ಕಾಮಗಾರಿ ನಡೆಯುತ್ತಿತ್ತು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ತೋಟ ಇರುವವರ ಮನೆಗಳಲ್ಲಿ ತೆಂಗಿನಕಾಯಿ ಸುಲಿಯುವ ಸುಲಿಗೆ ಮಣೆ ಇರುತ್ತದೆ ಎಂದರೆ ಸರಿ. ಚಾಸಾ-14 ಹಾಗೂ ಆರೋಪಿಯ ನಡುವೆ ಹಿತ್ತಲಿನ ವಿಚಾರಕ್ಕೆ ಜಗಳ ನಡೆಯುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಊರಿನ ಹೆಣ್ಣುಮಕ್ಕಳೊಂದಿಗೆ ಅಸಭ್ಯವಾಗಿ ವರ್ತಿಸುತ್ತಿದ್ದ ಬಗ್ಗೆ ಚಾಸಾ-14 ರವರನ್ನು ಹೊರತುಪಡಿಸಿ ಬೇರೆ ಯಾರೂ ದೂರು ನೀಡಿರುವುದಿಲ್ಲ ಎಂದರೆ ಸಾಕ್ಷಿಯು, ಊರಿನವರೂ ಸಹ ಹಲವು ಬಾರಿ ಆರೋಪಿಯ ವಿರುದ್ಧ ದೂರು ನೀಡಿದ್ದು, ಪೊಲೀಸರು ಆತನಿಗೆ ಎಚ್ಚರಿಕೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ-14 ರವರು ನೀಡಿದ ದೂರಿನ ಗುನ್ನಾ ಸಂಖ್ಯೆ ನನಗೆ ನೆನಪಿಲ್ಲ, ಆದರೆ ಪ್ರಕರಣವು ಹೊನ್ನಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿಯ ಮತ್ತು ಚಾಸಾ-14 ರವರು ಮನೆಯ ಮುಂದಿನ ರಸ್ತೆಯಲ್ಲಿ ಬಹಳಷ್ಟು ಜನರು ಓಡಾಡುತ್ತಾರೆ ಎಂದರೆ, ಸಾಕ್ಷಿಯು ಮಸೀದಿಗೆ ಹೋಗುವವರು ಆ ರಸ್ತೆಯಲ್ಲಿ ಓಡಾಡುತ್ತಾರೆ ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

ಆರೋಪಿಯು ನನ್ನ ಹೆಂಡತಿಯ ತಂಗಿಗೆ ವಿಚ್ಛೇದನ ನೀಡಿದ್ದಾನೆ ಎನ್ನುವ ಕಾರಣಕ್ಕೆ ಸುಳ್ಳು ದೂರನ್ನು ಬರೆದು, ನಾನು ಆತನ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/-
(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.